AUGUST 08, 2025

**AKASHAVANI - DHARWAD**

**PRADESH SAMACHARA (KANNADA) 07.05 A.M.**

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

<><><>

**ಮುಖ್ಯಾಂಶಗಳು**

<><><>

- **ರಾಜ್ಯದ ಕೈಮಗ್ಗ ನೇಕಾರರಿಗೆ ಪ್ರೋತ್ಸಾಹ ಹಾಗೂ ದೇಶಿ ಉತ್ಪನ್ನಗಳಿಗೆ ಸೂಕ್ತ ಮಾರುಕಟ್ಟೆ ಕಲ್ಪಿಸಲು, ಸರ್ಕಾರದಿಂದ ಹಲವು ಕ್ರಮ.**
- **ರಾಜ್ಯದ ಸಾಮಾಜಿಕ ಹಾಗೂ ಶೈಕ್ಷಣಿಕ ಸ್ಥಿತಿ; ಹಿಂದುಳಿದ ಆಯೋಗದಿಂದ, ಡಿಜಿಟಲ್ ಸಮೀಕ್ಷೆ.**
- **ಪ್ರಾದೇಶಿಕ ಅಸಮತೋಲನ ನಿವಾರಣೆ; ಸಮಗ್ರ ಅಧ್ಯಯನ ವರದಿ, ಅಕ್ಟೋಬರ್‌ನಲ್ಲಿ, ಸರ್ಕಾರಕ್ಕೆ ಸಲ್ಲಿಕೆ.**
- **ಇಂದು, ವರಮಹಾಲಕ್ಷ್ಮೀ ಹಬ್ಬ; ನಾಡಿನಾದ್ಯಂತ ಕಳೆಗಟ್ಟಿದ ಸಂಭ್ರಮ.**

<><><>

**ಈಗ ವಾರ್ತೆಗಳ ವಿವರ**

<><><>

**ರಾಜ್ಯದ ಕೈಮಗ್ಗ ನೇಕಾರರು ತಯಾರಿಸುವ, ಸ್ವದೇಶಿ ಸಂಕೇತದ ಉತ್ಪನ್ನಗಳಿಗೆ, ಸೂಕ್ತ ಮಾರುಕಟ್ಟೆ ಕಲ್ಪಿಸಿ, ಅವರಿಗೆ ಪ್ರೋತ್ಸಾಹ ನೀಡಲು, ಸರ್ಕಾರ ಯೋಜಿತ ಪ್ರಯತ್ನ ಕೈಗೊಂಡಿದೆ ಎಂದು, ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ. ಎಕ್ಸ್ ಮಾಧ್ಯಮದಲ್ಲಿ, ಈ ವಿಷಯ ಪ್ರಕಟಿಸಿರುವ ಮುಖ್ಯಮಂತ್ರಿ, ರೇಷ್ಮೆ, ಹತ್ತಿ ಮತ್ತು ಉಣ್ಣೆ ಕ್ಷೇತ್ರದ, ಕೈಮಗ್ಗ ನೇಕಾರರ ನೈಪುಣ್ಯತೆ, ತಾಂತ್ರಿಕತೆ ಮತ್ತು ಉತ್ಕೃಷ್ಟತೆಗಾಗಿ, ಕೈಮಗ್ಗ ನೇಕಾರರಿಗೆ, ರಾಜ್ಯ ಮಟ್ಟದ ಪ್ರಶಸ್ತಿ ಪ್ರದಾನ ಮಾಡಲಾಗುತ್ತಿದೆ. ನೇಕಾರರ ಮಕ್ಕಳಿಗೆ, ವಿದ್ಯಾರ್ಥಿ ವೇತನ, ಕಾಯಕ ಜೀವಿಗಳ ಸರ್ವತೋಮುಖ ಪ್ರಗತಿ, ತಮ್ಮ ಸರ್ಕಾರದ ಆದ್ಯತೆ, ಎಂದಿದ್ದಾರೆ. ತಮ್ಮ ಶ್ರಮದ ಮೂಲಕ, ಈ ಬಾರಿ ಪ್ರಶಸ್ತಿಯ ಮೆರಗು ಹೆಚ್ಚಿಸಿದ, ಎಲ್ಲ ನೇಕಾರರನ್ನು, ಅವರು ಅಭಿನಂದಿಸಿದ್ದಾರೆ.**

<><><>

**1905, ಆಗಸ್ಟ್ 7 ರಂದು ನಡೆದ, ಸ್ವದೇಶಿ ವಸ್ತ್ರ ಚಳವಳಿಯ ಸ್ಮರಣಾರ್ಥ, '11 ನೇ ರಾಷ್ಟ್ರೀಯ ಕೈಮಗ್ಗ ದಿನ' ಆಚರಿಸಲಾಯಿತು. 120 ವರ್ಷಗಳ ಹಿಂದೆ, ಸ್ವದೇಶಿ ಚಳವಳಿಯಲ್ಲಿ ಪ್ರಮುಖ ಪಾತ್ರವಹಿಸಿದ್ದ, ಬಾಲಗಂಗಾಧರ ತಿಲಕ, ಬಾಪೂಜಿ, ಲಾಲಾ ಲಜಪತ್ ರಾಯ ಮೊದಲಾದ ಮಹನೀಯರ ಸೇವೆಯನ್ನು ಸ್ಮರಿಸಿ, ಶ್ರದ್ಧಾಂಜಲಿ ಅರ್ಪಿಸಲಾಯಿತು.**

<><><>

ಕೈಮಗ್ಗದ ಅಗಾಧ ಪರಂಪರೆ, ನಿಖರ ಕೌಶಲ, ಪರಿಸರ ಸ್ನೇಹಿಯಾಗಿ, ಗ್ರಾಮೀಣ ಗೃಹ ಉತ್ಪಾದನೆ, ಇವೆಲ್ಲವನ್ನೂ ತನ್ನೊಳಗೆ ನೇಯ್ದುಕೊಂಡಿರುವ, ಭಾರತೀಯ ಕೈಮಗ್ಗ ವಸ್ತ್ರಗಳು, ರಾಷ್ಟ್ರದ ಘನತೆ ಮತ್ತು ಸಂಸ್ಕೃತಿಯ ಪ್ರತೀಕ ಎಂದೇ ಪರಿಗಣಿತ, ರಾಷ್ಟ್ರೀಯ ವಸ್ತ್ರ 'ಖಾದಿ' ಎನಿಸಿದೆ.

<><><>

'ಕೈಮಗ್ಗದ ಉತ್ಪನ್ನಗಳನ್ನು ಹೆಚ್ಚು, ಹೆಚ್ಚು ಬಳಸಿ, ನೇಕಾರಿಕೆಯನ್ನು ಪ್ರೋತ್ಸಾಹಿಸೋಣ; ಕೈಮಗ್ಗದ ಬಟ್ಟೆಗಳ ಮಹತ್ವವನ್ನು ಇತರರಿಗೂ ತಿಳಿಸೋಣ' ಎಂದು, ಖಾದಿ ಕಾರ್ಯಕರ್ತರು, ಸಂಕಲ್ಪಿಸಿದ್ದಾರೆ.

<><><>

ಸಣ್ಣ ಹಾಗೂ ಮಧ್ಯಮ ಗಾತ್ರದ, ಉದ್ದಿಮೆ ಹಾಗೂ ಕೈಗಾರಿಕೆಗಳ ಶ್ರೇಯೋಭಿವೃದ್ಧಿಗೆ, ಕೇಂದ್ರ ಸರ್ಕಾರ, ಓವರ್ ಡ್ರಾಫ್ಟ್ ಸೌಲಭ್ಯದ, ಕಡಿಮೆ ಬಡ್ಡಿ ದರದ, ಸಾಲ ಸೌಲಭ್ಯ ಜಾರಿಗೊಳಿಸಿದೆ. ಕೈಮಗ್ಗದ ಖಾದಿ ವಸ್ತುಗಳನ್ನು, ಧಾರವಾಡದಲ್ಲಿ ಪ್ರಚುರ ಪಡಿಸುತ್ತಿರುವ, 'ವಸ್ತ್ರ ಕುಟಿ' ಉದ್ದಿಮೆಯ ಸಂಚಾಲಕಿ, ಯೋಜನೆಯ ಫಲಾನುಭವಿ, ಕಮಲಾ ಚೇತನ ದೇಶಪಾಂಡೆ, ಪ್ರದೇಶ ಸಮಾಚಾರಕ್ಕಾಗಿ ತಮ್ಮ ಅನಿಸಿಕೆ ಹಂಚಿಕೊಂಡಿದ್ದಾರೆ.

<><><>

ಕಮಲಾ ಚೇತನ ದೇಶಪಾಂಡೆ ಧ್ವನಿ **45** ಸೆಕೆಂದುಗಳು

<><><>

ರಾಜ್ಯ ಹಿಂದುಳಿದ ವರ್ಗಗಳ ಆಯೋಗ, ರಾಜ್ಯದ ನಾಗರಿಕರ ಸಾಮಾಜಿಕ ಮತ್ತು ಶೈಕ್ಷಣಿಕ ಸ್ಥಿತಿ ಗತಿ ಬಗ್ಗೆ, ಡಿಜಿಟಲ್ ಸಮೀಕ್ಷೆ ನಡೆಸಲಿದೆ ಎಂದು, ಸಂಸದೀಯ ವ್ಯವಹಾರಗಳ ಖಾತೆ ಸಚಿವ ಎಚ್.ಕೆ.ಪಾಟೀಲ, ತಿಳಿಸಿದ್ದಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಅಧ್ಯಕ್ಷತೆಯಲ್ಲಿ, ಬೆಂಗಳೂರಿನಲ್ಲಿ ಸಚಿವ ಸಂಪುಟ ಸಭೆ ನಡೆಯಿತು. ನ್ಯಾಯಮೂರ್ತಿ ನಾಗಮೋಹನ್ ದಾಸ್ ಆಯೋಗದ, ಪರಿಶಿಷ್ಟ ಜಾತಿ ಒಳ ಮೀಸಲಾತಿ ವರದಿ ಕುರಿತು, ಚರ್ಚಿಸಿ, ನಿರ್ಣಯಿಸಲು, ಇದೇ **16** ರಂದು ವಿಶೇಷ ಸಚಿವ ಸಂಪುಟ ಸಭೆ ನಡೆಯಲಿದೆ, ಎಂದರು. ವಿವಾಹಿತ ಮಗಳಿಗೂ ಅನುಕಂಪದ ಉದ್ಯೋಗ ಒದಗಿಸುವ ನಿಟ್ಟಿನಲ್ಲಿ, ನಿಯಮ ಬದಲಾವಣೆ ಮಾಡಲು, ಸಂಪುಟ ಸಮ್ಮತಿಸಿದೆ. ಕಾರ್ಮಿಕರ ಭವಿಷ್ಯ ನಿಧಿ, ಮಾರ್ಗಸೂಚಿ ಅನ್ವಯ, ಕರ್ನಾಟಕ ಕಾರ್ಮಿಕರ ವಿಮಾ ಸಂಸ್ಥೆ ಸ್ಥಾಪನೆಯಾಗಲಿದೆ. ರಾಜ್ಯದ ಹಲವು ಪಟ್ಟಣ ಪಂಚಾಯ್ತಿ, ಪುರಸಭೆಗಳನ್ನು ಮೇಲ್ದರ್ಜೆಗೇರಿಸುವ ಪ್ರಸ್ತಾವಕ್ಕೆ, ತಾತ್ವಿಕ ಒಪ್ಪಿಗೆ ದೊರೆತಿದೆ. ಹಾಗೂ ಇದೇ **11** ರಿಂದ ಸಮಾವೇಶ ಗೊಳ್ಳಲಿರುವ, ವಿಧಾನಮಂಡಲ ಅಧಿವೇಶನದಲ್ಲಿ, **18** ವಿಧೇಯಕಗಳನ್ನು ಮಂಡಿಸಲು, ಸಚಿವ ಸಂಪುಟ ಸಹಮತಿಸಿದೆ ಎಂದು, ಸಚಿವ ಎಚ್.ಕೆ. ಪಾಟೀಲ ತಿಳಿಸಿದರು.

<><><>

ಈಗ ಪ್ರಕಟಣೆ,
ನಂತರ ಪ್ರದೇಶ ಸಮಾಚಾರ ಮುಂದುವರೆಯುವುದು..
**(1 ನಿ. 15 ಸೆ.)**

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಆಕಾಶವಾಣಿ ಸುದ್ದಿಗಳಿಗಾಗಿ, ನಮ್ಮ **X** ಖಾತೆ **@airnews_dharwad** ಹಾಗೂ

ನಮ್ಮ ಫೇಸ್ಬುಕ್ ಖಾತೆ **Airrnu Dharwad** ಅನುಸರಿಸಿ.

<><><>

ಕಲ್ಯಾಣ ಕರ್ನಾಟಕದ, ಕಟ್ಟ ಕಡೆಯ ವ್ಯಕ್ತಿಯ, ತಲಾ ಆದಾಯ ಮತ್ತು ಮಾನವ ಅಭಿವೃದ್ಧಿ ಸೂಚ್ಯಂಕ ಹೆಚ್ಚಿಸುವ, ಗುರಿಯೊಂದಿಗೆ, 7 ಜಿಲ್ಲೆಗಳ ಸಮಗ್ರ ಅಭಿವೃದ್ಧಿಗೆ, ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ, ಪಂಚ ಮತ್ತು ದಶ ವಾರ್ಷಿಕ ದೂರದೃಷ್ಟಿ ಯೋಜನೆಗಳನ್ನು ರೂಪಿಸಬೇಕು ಎಂದು, ಪ್ರಾದೇಶಿಕ ಅಸಮತೋಲನ ನಿವಾರಣಾ ಸಮಿತಿ ಅಧ್ಯಕ್ಷ, ಎಂ.ಗೋವಿಂದ ರಾವ್ ಅಭಿಪ್ರಾಯ ಪಟ್ಟಿದ್ದಾರೆ. ಕಲಬುರಗಿಯ, ಪ್ರದೇಶಾಭಿವೃದ್ಧಿ ಮಂಡಳಿ ಸಭಾಂಗಣದಲ್ಲಿ, ಅವರು ಸಭೆ ನಡೆಸಿದರು. ಮೂವತ್ತೈದು ಸೂಚ್ಯಂಕಗಳ ಆಧಾರದ ಮೇಲೆ, ಡಿ.ಎಂ.ನಂಜುಂಡಪ್ಪ ವರದಿ, ರೂಪುಗೊಂಡಿತ್ತು. ಸಮರ್ಪಕ ಅನುದಾನ ನೀಡಿದ್ದರೂ, ನಿರೀಕ್ಷಿತ ಅಭಿವೃದ್ಧಿ ಸಾಧ್ಯವಾಗದ, ಕಾರಣಗಳನ್ನು ಪತ್ತೆ ಹಚ್ಚಿ, ಪರಿಹಾರ ಸಮೇತ, ಅಸಮಾನತೆ ನಿವಾರಣೆಗೆ, ಸಮಗ್ರ ವರದಿಯನ್ನು, ಅಕ್ಟೋಬರ್ ತಿಂಗಳಲ್ಲಿ, ಸರ್ಕಾರಕ್ಕೆ ಸಲ್ಲಿಸುವುದಾಗಿ, ಅವರು ತಿಳಿಸಿದರು. ಕೆ.ಕೆ.ಆರ್.ಡಿ.ಬಿ. ಅಧ್ಯಕ್ಷ ಅಜಯ್ ಸಿಂಗ್ ಪಾಲ್ಗೊಂಡಿದ್ದರು.

<><><>

ಕೇಂದ್ರ ಪುರಸ್ಕೃತ, ಆರ್ಥಿಕ ಹಾಗೂ ಸಾಮಾಜಿಕ ಭದ್ರತಾಯೋಜನೆಗಳ ಕುರಿತು, ಜನಸಾಮಾನ್ಯರಿಗೆ ತಿಳಿವಳಿಕೆ ಮೂಡಿಸುವ, ಜನ ಜಾಗೃತಿ ಕಾರ್ಯಕ್ರಮ, ರಾಜ್ಯದ 31 ಜಿಲ್ಲೆಗಳಲ್ಲಿ, ಸೆಪ್ಟೆಂಬರ್ 30ರ ವರೆಗೆ ಮುಂದುವರಿಯಲಿದೆ. ಹಾವೇರಿ ತಾಲೂಕು, ಕಬ್ಬೂರು ಗ್ರಾಮ ಪಂಚಾಯ್ತಿ ವ್ಯಾಪ್ತಿಯಲ್ಲಿ ಜರುಗಿದ, ಜನ ಜಾಗೃತಿ ಕಾರ್ಯಕ್ರಮದಲ್ಲಿ, ಜಿಲ್ಲಾ ಮಾರ್ಗದರ್ಶಿ ಬ್ಯಾಂಕ್ ಪ್ರಬಂಧಕ ಪ್ರಭುದೇವ, ಪ್ರಧಾನಮಂತ್ರಿ ಸುರಕ್ಷಾ ವಿಮೆ, ಪ್ರಧಾನಮಂತ್ರಿ ಜೀವನಜ್ಯೋತಿ ವಿಮೆ ಹಾಗೂ ಅಟಲ್ ಪಿಂಚಣಿ ಯೋಜನೆಯಡಿ, ರೈತರು ಹೆಸರು ನೋಂದಾಯಿಸುವಂತೆ ಕೋರಿದರು.

<><><>

ಪ್ರಬಂಧಕ ಪ್ರಭುದೇವ ಧ್ವನಿ 45 ಸೆಕೆಂದುಗಳು

<><><>

ಇಂದು, ಶ್ರಾವಣ ಮಾಸದ, ವರಮಹಾಲಕ್ಷ್ಮೀ ಹಬ್ಬದ ಸಂಭ್ರಮ, ನಾಡಿನ ಮನೆ–ಮನಗಳಲ್ಲಿ, ಕಳೆಗಟ್ಟಿದೆ. ಇಂದಿನ ಪೂಜೆ, ವ್ರತಾಚರಣೆಗೆ, ಬೆಂಗಳೂರು ಗ್ರಾಮಾಂತರ ಜಿಲ್ಲೆ, ದಾವಣಗೆರೆ, ಚಿಕ್ಕಬಳ್ಳಾಪುರದ ಮಾರುಕಟ್ಟೆಗಳಲ್ಲಿ ನಿನ್ನೆ, ಹಣ್ಣು–ಹೂವು, ಬಾಳೆ ಕಂದು, ಮಾವಿನ ತೋರಣ, ಸಿಹಿ ತಿನಿಸುಗಳು ಸೇರಿದಂತೆ, ಪೂಜಾ ಸಾಮಗ್ರಿಗಳ ಖರೀದಿ ಭರಾಟೆ, ಬೆಲೆ ಏರಿಕೆಯ ಮಧ್ಯೆಯೂ, ಜೋರಾಗಿತ್ತು.

<><><>

ಧಾರವಾಡದ ಸೂಪರ್ ಮಾರುಕಟ್ಟೆ, ಸುಭಾಸ ರಸ್ತೆ, ಹುಬ್ಬಳ್ಳಿಯ ಹೂವಿನ ಪೇಟೆ ಸೇರಿದಂತೆ, ಹಲವೆಡೆ ಜಿಟಿ, ಜಿಟಿ, ಆಗೊಮ್ಮೆ, ಈಗೊಮ್ಮೆ ಸುರಿಯುತ್ತಿದ್ದ ಮಳೆಯ ಮಧ್ಯೆಯೂ, ಮಾರಾಟ ಮತ್ತು ಖರೀದಿಗೆ, ಜನಜಂಗುಳಿ ನೆರೆದಿತ್ತು. ಸಂಚಾರ ಪೊಲೀಸರು, ತುಂಬ ಶ್ರಮವಹಿಸಿ, ವಾಹನ ದಟ್ಟಣೆ ಮತ್ತು ನಿಲುಗಡೆ ಸಮಸ್ಯೆ ಪರಿಹರಿಸಿದರು.

<><><>

ಮಂತ್ರಾಲಯದಲ್ಲಿ, ಶ್ರೀ ರಾಘವೇಂದ್ರ ಸ್ವಾಮಿಗಳ 354ನೇ ಆರಾಧನಾ ಮಹೋತ್ಸವಕ್ಕೆ ಇಂದು ಬೆಳಗ್ಗೆ ಚಾಲನೆ ದೊರೆತಿದೆ. ಶ್ರೀ ರಾಘವೇಂದ್ರ ಮಠದ ಪೀಠಾಧಿಪತಿ, ಶ್ರೀ ಸುಬುಧೇಂದ್ರ ತೀರ್ಥರು, ಶ್ರೀ ಮಠದ ಪರಂಪರೆಯಂತೆ, ಇಂದು ಸಂಜೆ 6 ಗಂಟೆಗೆ, ಸಪ್ತ ರಾತ್ರೋತ್ಸವ ಹಾಗೂ ಧಾರ್ಮಿಕ ವಿಧಿ–ವಿಧಾನಗಳನ್ನು, 14ನೇ ತಾರೀಖಿನ ವರೆಗೆ, ನೆರವೇರಿಸಲಿದ್ದಾರೆ.

<><><>

ಅಗ್ನಿವೀರ್ ಸೇನಾ ನೇಮಕಾತಿ ಜಾಥಾ, ಇಂದಿನಿಂದ 22ರ ವರೆಗೆ, ರಾಯಚೂರಿನ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ಆವರಣದಲ್ಲಿ, ಆಯೋಜಿತವಾಗಿದೆ. ರಾಜ್ಯದ ವಿವಿಧ ಜಿಲ್ಲೆಗಳ ನೋಂದಾಯಿತ ಅಭ್ಯರ್ಥಿಗಳು, ಈ ಜಾಥಾದಲ್ಲಿ ಪಾಲ್ಗೊಳ್ಳಲಿದ್ದಾರೆ. 25ರಂದು ದೇಹದಾರ್ಢ್ಯತೆ ಪರೀಕ್ಷೆ ಹಾಗೂ 26 ರಂದು ವೈದ್ಯಕೀಯ ಪರೀಕ್ಷೆ ನಡೆಯಲಿದೆ.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

<><><>

- ರಾಜ್ಯದ ಕೈಮಗ್ಗ ನೇಕಾರರಿಗೆ ಪ್ರೋತ್ಸಾಹ ಹಾಗೂ ಉತ್ಪನ್ನಗಳಿಗೆ ಸೂಕ್ತ ಮಾರುಕಟ್ಟೆ ಕಲ್ಪಿಸಲು, ಸರ್ಕಾರದಿಂದ ಹಲವು ಕ್ರಮ.
- ರಾಜ್ಯದ ಸಾಮಾಜಿಕ ಹಾಗೂ ಶೈಕ್ಷಣಿಕ ಸ್ಥಿತಿ; ಹಿಂದುಳಿದ ಆಯೋಗದಿಂದ, ಡಿಜಿಟಲ್ ಸಮೀಕ್ಷೆ.
- ಪ್ರಾದೇಶಿಕ ಅಸಮತೋಲನ ನಿವಾರಣೆ; ಸಮಗ್ರ ಅಧ್ಯಯನ ವರದಿ, ಅಕ್ಟೋಬರ್‌ನಲ್ಲಿ, ಸರ್ಕಾರಕ್ಕೆ ಸಲ್ಲಿಕೆ.
- ಇಂದು, ವರಮಹಾಲಕ್ಷ್ಮೀ ಹಬ್ಬ; ನಾಡಿನಾದ್ಯಂತ ಕಳೆಗಟ್ಟಿದ ಸಂಭ್ರಮ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.

<><><>